# ವಿಕಾಸ-ವಿನಾಶದ ಜುಗಲಬಂದಿ

## 2023 ಹೂವು ಮುಳ್ಳು

ಚರಿತ್ರೆಯುದ್ದಕ್ಕೂ ಮನುಕುಲದ ಜೀವಹಿಂಡುತ್ತಿರುವ ಸಂಗತಿಗಳಲ್ಲಿ ಯುದ್ಧ ಮುಖ್ಯವಾದುದು. ಹಿಂಸೆಯ ಆಡುಂಬೊಲವಾದ ಯುದ್ಧದಿಂದ ಮನುಷ್ಯನನ್ನು ವಿಮುಖಗೊಳಿಸಲು ಎಷ್ಟೇ ಪ್ರಯತ್ನಗಳು ನಡೆದರೂ, ಯುದ್ಧ ಮತ್ತೆ ಮತ್ತೆ ಮರುಕಳಿಸುತ್ತಿದೆ. 2023ರಲ್ಲೂ, ವರ್ಷದುದ್ದಕ್ಕೂ ಯುದ್ಧದಿಂದಾಗಿ ಜಗತ್ತು ಜರ್ಝರಿತಗೊಂಡಿದೆ. ರಷ್ಯಾ-ಉಕ್ರೇನ್ ಹಾಗೂ ಇಸ್ರೇಲ್-ಹಮಾಸ್‌ಗಳ ನಡುವಣ ಯುದ್ಧದ ಕರಿನೆರಳು, ಇಡೀ ವಿಶ್ವವನ್ನು ಆವರಿಸಿಕೊಂಡಿದೆ. ವಿನಾಶದ ವಿದ್ಯಮಾನಗಳ ಜೊತೆಜೊತೆಗೆ ವಿಕಾಸದ ಹೆಜ್ಜೆಗುರುತುಗಳೂ ಇತಿಹಾಸದ ಪುಟಗಳಿಗೆ ಸೇರುತ್ತಿರುವುದಕ್ಕೆ ಈ ವರ್ಷ ಸಾಕ್ಷಿಯಾಗಿದೆ. ಭಾರತದ ‘ಚಂದ್ರಯಾನ-3’ ಅಂಥದೊಂದು ವಿಕಾಸದ ಹೆಜ್ಜೆ. ‘ಸುಧಾ’ ವರ್ಷಾಂತ್ಯ ಸಂಚಿಕೆಯಲ್ಲಿನ ಈ ಟಿಪ್ಪಣಿಗಳು, ಮನುಕುಲ ಕೈಗೊಂಡಿರುವ ವಿಕಾಸ-ವಿನಾಶದ ಜೋಡಿದೋಣಿಯ ಪಯಣವನ್ನು ಸೂಚಿಸುವಂತಿದೆ. ಅಂದಹಾಗೆ, ಚುನಾವಣೆ ಹಾಗೂ ಪಕ್ಷ ರಾಜಕಾರಣವನ್ನು ಈ ಅವಲೋಕನ ಒಳಗೊಂಡಿಲ್ಲ.

**ಸುಧಾ ಬಳಗ**